


ಪದ್ಧತಿಯನ್ನು ಅನುಸರಿಸಿ ವರ್ಷ, ತಿಂಗಳು, ದಿನಗಳ ಕಲ್ಪನೆ ಚಾಲ್ತಿಗೆ ಬಂದಿದ್ದವು. ಆಕಾಶದಲ್ಲಿ ಯಾವ ನಕ್ಷತ್ರ-ಗ್ರಹ ಯಾವಾಗ ಯಾವ ಸ್ಥಾನದಲ್ಲಿದೆ ಎನ್ನುವ ಆಧಾರದ ಮೇಲೆ ಮಾಸ, ವಾರ, ದಿನಗಳ ಕಲ್ಪನೆ ಬೆಳೆದಿದ್ದವು. ಮತ್ತೆ ಆ ಗಣನೆ ಕೆಲವೊಮ್ಮೆ ಸೌರಮಾನ ವರ್ಷಕ್ಕೆ ಪೂರ್ತಿ ಹೊಂದಾಣಿಕೆಯಾಗದಿದ್ದಾಗ ಅಧಿಕ ವರ್ಷದ ಕಲ್ಪನೆಯೂ ಹುಟ್ಟಿ ಬೆಳೆಯಿತು. ಇದೀಗ ಪ್ರತಿವರ್ಷವೂ ಹೊಚ್ಚ ಹೊಸ ಕ್ಯಾಲೆಂಡರ್ ಗೋಡೆಯನ್ನು ಏರಿದರೂ ಕಾಲಗಣನೆಯ ಅಂತಹ ಒಂದು ಅನುಕ್ರಮ ಅನುಕೂಲ ನಮ್ಮ ಅರಿವು ಅನುಭವಗಳ ಮಿತಿಗಿಂತ ಬಹಳ ಹಿಂದಿನದು. ಹೀಗೆ ಎಂದೆಂದೋ ಹುಟ್ಟಿ ಬೆಳೆದು ಬೆಳವಣಿಗೆ ಹೊಂದಿದ ಲೆಕ್ಕಾಚಾರ ಪ್ರಜ್ಞೆ, ಜ್ಞಾನ ವಿಜ್ಞಾನಗಳು ಗೋಡೆಯ ಮೇಲೆ ಕಿಟಕಿಯ ಪಕ್ಕದಲ್ಲಿ ಸಣ್ಣ ಗಾತ್ರದ್ದಾಗಿ ಕಂಡರೂ ಕಾಲದ ದೊಡ್ಡ ಕಿಂಡಿಯಾಗಿವೆ. ಹಿಂದಿನದಕ್ಕೂ ಮುಂದಿನದಕ್ಕೂ ಸಂಬಂಧ ಬೆಸೆವ